# ಕುರುಕ್ಷೇತ್ರ

ಈ ಬಾರಿ ಕುರುಕ್ಷೇತ್ರದಲ್ಲಿ
ಉಳಿದವನು ಒಬ್ಬನೇ ಧರ್ಮರಾಯ!

ಪಾದ ಮುಳುಗೋವಷ್ಟು ರಕ್ತ.
ಉಂಡೆಸೆದ ಎಲೆಗಳು
ಮನುಷ್ಯರ ಕೈ ಕಾಲು ತಲೆಗಳು.
ಆಡುತ್ತಿರಬಹುದೇ ಎಲ್ಲಾದರೂ ಉಸಿರು
ಧರ್ಮಜ ಹುಡುಕುತ್ತ ಹೊರಟ.

ಸತ್ತ ದುಶ್ಶಾಸನನ ಎದೆ ಮೇಲೆಯೆ
ಜೀವ ಬಿಟ್ಟಿದ್ದಾನೆ ಭೀಮ!
ಬಿದ್ದ ದ್ರೌಪದಿಯ ಕೈಯಲ್ಲೇ ಇದೆ ಬಾಚಣಿಗೆ.
ಹೂತ ಕರ್ಣನ ರಥದ ಎದುರೇ ಬಿದ್ದ ಅರ್ಜುನ.
ಬಾಣಗಳ ಮೊನೆಯ ಮೇಲೆ ಮಲಗಿದ್ದ
ಅಜ್ಜ ಭೀಷ್ಮರಿಗೆ ತನ್ನದು ಇಚ್ಛಾ ಮರಣ
ಕೌರವನಿಗೆ ಪರರದ್ದು ಸ್ವೇಚ್ಛಾ ಮರಣ.

ಅಭಿಮನ್ಯುವಿನ ದೇಹಕ್ಕೆ
ಸಂಸ್ಕಾರವಾಗಿದೆ
ಆದರೆ ಕರ್ಣ ಕತ್ತರಿಸಿದ ಅವನ ಕೈಗಳು...
ಛೇ...
ಇಲ್ಲೇ ಬಿದ್ದಿವೆಯಲ್ಲ!

ಸತ್ತಿರುವವರಾದರೂ ಯಾರು?
ದೂರ ದೇಶದ ಸೈನಿಕರಷ್ಟೇ ಅಲ್ಲ
ಅಜ್ಜ, ಮಾವ, ಅಳಿಯ, ಮಗ, ಮೊಮ್ಮಕ್ಕಳು.

ಯುದ್ಧರಂಗದಲ್ಲಿ ಎಲ್ಲೂ
ಬಿದ್ದ ಕೌರವನ ಪತ್ತೆಯಿಲ್ಲ,
ಹಸ್ತಿನಾವತಿಯ ಹೆಬ್ಬಾಗಿಲಿಗೆ
ಬಂದ ಧರ್ಮರಾಯ.

